ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 02 ಎಸಿಎಂ(2) 2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:13-04-2017.

## -:: ಪ್ರವೇಶಾಧಿಸೂಚನೆ ::-

2017-18ನೇ ಸಾಲಿಗೆ ಕೆಳಕಂಡ ಖಾಸಗಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿ 8ನೇ ತರಗತಿಯ ಪ್ರವೇಶಕ್ಕಾಗಿ ಪ್ರವೇಶಾಧಿಸೂಚನೆ ಹೊರಡಿಸಲಾಗಿದೆ.

1. ಶ್ರೀ.ವಿಶ್ವಕರ್ಮ ಎಜುಕೇಶನಲ್ & ಕಲ್ಚರಲ್ ಟ್ರಸ್ಟ್ ಶ್ರೀ. ಕಾಳಿಕಾಂಬ ಕಿರಿಯ ತಾಂತ್ರಿಕ ಶಾಲೆ, ಕಾರ್ಕಳ ತಾ: ಉಡುಪಿ ಜಿಲ್ಲೆ.
2. ಬೆಳಗಾಂ ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಕಿರಿಯ ತಾಂತ್ರಿಕ ಶಾಲೆ, ತುಕ್ಕಾನಹಟ್ಟಿ, ಗೋಕಾಕ್ ತಾಲ್ಲೂಕ್, ಬೆಳಗಾವಿ ಜಿಲ್ಲೆ.- 591 224.
3. ಶ್ರೀ. ರೇವಣಸಿದ್ದೇಶ್ವರ ಸೊಸೈಟಿ ಡಾ: ಎಂ.ಪಿ.ನಾಡಗೌಡ ಕಿರಿಯ ತಾಂತ್ರಿಕ ಶಾಲೆ, ಘಟಪ್ರಭ, ಗೋಕಾಕ್ ತಾ: ಬೆಳಗಾಂ ಜಿಲ್ಲೆ.
4. ಪ್ರಗತಿ ಎಜುಕೇಶನ್ ಟ್ರಸ್ಟ್ ಕಿರಿಯ ತಾಂತ್ರಿಕ ಶಾಲೆ, ಕಂಪ್ಲಿ, ಬಳ್ಳಾರಿ ಜಿಲ್ಲೆ
5. ಶ್ರೀ. ದುರ್ಗಾಮಾತಾ ವಿದ್ಯಾಸಂಸ್ಥೆ ಕಿರಿಯ ತಾಂತ್ರಿಕ ಶಾಲೆ, ಹಿರೇಕೆರೂರು, ಹಾವೇರಿ ಜಿಲ್ಲೆ
6. ಕೆ. ಎಸ್ ಗೌಡ ಎಜುಕೇಷನ್ ಟ್ರಸ್ಟ್ ಕಿರಿಯ ತಾಂತ್ರಿಕ ಶಾಲೆ, ನಿಂತಿಕಲ್ಲು, ಸೂಳ್ಯ. ದ.ಕ.ಜಿಲ್ಲೆ.

**ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳ ವೈಶಿಷ್ಟ್ಯಗಳು:-**

1. ಪ್ರೌಢಶಾಲೆಗಳಲ್ಲಿ ಬೋಧಿಸಲಾಗುವ ವಿಷಯಗಳೊಂದಿಗೆ ಕೆಳಕಂಡ ತಾಂತ್ರಿಕ ವಿಷಯಗಳನ್ನು ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿ ಬೋಧಿಸಲಾಗುತ್ತದೆ.
   1) ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಅಂಡ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್
   2) ಇಂಜಿನಿಯರಿಂಗ್ ಡ್ರಾಯಿಂಗ್
   3) ಕಾರ್ಪೆಂಟ್ರಿ, ಫಿಟ್ಟಿಂಗ್ ಅಂಡ್ ಮೆಷಿನ್ ಶಾಪ್
   4) ಎಲೆಕ್ಟ್ರಿಕಲ್ ವೈರಿಂಗ್ ಅಂಡ್ ಫಿಟ್ಟಿಂಗ್

2. ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಯಲ್ಲಿ ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣ ಹೊಂದಿದ ಅಭ್ಯರ್ಥಿಗಳಿಗಾಗಿಯೇ ಡಿಪ್ಲೋಮಾ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕೆಲವು ಸ್ಥಾನಗಳನ್ನು ಕಾದಿರಿಸಲಾಗಿದೆ.

3. ಈ ಅಭ್ಯರ್ಥಿಗಳು ಪಿ.ಯು.ಸಿ ವ್ಯಾಸಂಗಕ್ಕೂ ಸಹ ಅರ್ಹರಾಗಿರುತ್ತಾರೆ.

4. ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿನ ಶಿಕ್ಷಣ ಮಾಧ್ಯಮ:- ಸಾಮಾನ್ಯ ವಿಷಯಗಳನ್ನು ಕನ್ನಡದಲ್ಲೂ ಹಾಗೂ ತಾಂತ್ರಿಕ ವಿಷಯಗಳನ್ನು ಇಂಗ್ಲೀಷ್‌ನಲ್ಲೂ ಬೋಧಿಸಲಾಗುವುದು.

5. <u>ಪ್ರವೇಶಕ್ಕಾಗಿ ಶಿಕ್ಷಣಾರ್ಹತೆ:-</u> ಅಭ್ಯರ್ಥಿಯು ಕರ್ನಾಟಕದ ಯಾವುದೇ ಮಾನ್ಯತೆ ಪಡೆದ ಶಿಕ್ಷಣ ಶಾಲೆಗಳಲ್ಲಿ 7ನೇ ತರಗತಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ವಿಷಯಗಳೊಂದಿಗೆ, ಇಂಗ್ಲೀಷ್ ಅಥವಾ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು.

6. **ಪ್ರವೇಶಕ್ಕಾಗಿ ಇತರೆ ಅರ್ಹತೆಗಳು:-**
   ಅ) ಭಾರತದ ಪ್ರಜೆಯಾಗಿರಬೇಕು.
   ಆ) ಅರ್ಜಿ ಸ್ವೀಕರಿಸುವ ಹಿಂದಿನ ದಿನಾಂಕಕ್ಕೆ ಅಭ್ಯರ್ಥಿಯು ಕರ್ನಾಟಕದ ಯಾವುದೇ ಅಂಗೀಕೃತ ಶಾಲೆಯಲ್ಲಿ ಕನಿಷ್ಠ 5 ವರ್ಷಗಳ ವ್ಯಾಸಂಗ ಮಾಡಿರಬೇಕು.

7. **ಪ್ರವೇಶ ಮುಗಿಸುವ ಅಂತಿಮ ದಿನಾಂಕ:-**
   **ಅ) ಪ್ರವೇಶ ನಿಯಮಗಳು ಮತ್ತು ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಅನುಸರಿಸಿ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ:31-05-2017ರ ಒಳಗೆ ಪ್ರವೇಶ ಮುಗಿಸತಕ್ಕದ್ದು.**
   **ಆ) ಪ್ರವೇಶ ಮುಗಿದ ನಂತರ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ಮೂಲ ದಾಖಲೆಗಳು ಹಾಗೂ ಒಂದು ಝೆರಾಕ್ಸ್ ಪ್ರತಿಯೊಂದಿಗೆ ದಿನಾಂಕ:05-06-2017ರ ಒಳಗೆ ಅನುಮೋದನೆಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.**

8. **ಎಂಟನೇ ತರಗತಿಗಳ ಪ್ರಾರಂಭ:-**
   ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿಗಧಿಪಡಿಸಿರುವ ಶೈಕ್ಷಣಿಕ ಕಾರ್ಯಕ್ರಮದನ್ವಯ ತರಗತಿಗಳನ್ನು ಪ್ರಾರಂಭಿಸಿ ನಿರ್ದೇಶನಾಲಯಕ್ಕೆ ವರದಿ ಮಾಡುವುದು.

ನಿರ್ದೇಶಕರು

***ಮೇಲ್ಕಂಡ ಎಲ್ಲಾ ಖಾಸಗಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರಿಗೆ*** - ಮೇಲ್ಕಂಡ ಅಧಿಸೂಚನೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಅಭ್ಯರ್ಥಿಗಳಿಗೆ ವಿವರವಾದ ಮಾಹಿತಿಯನ್ನು ನೀಡುವುದು.

ಪ್ರತಿ ಮಾಹಿತಿಗಾಗಿ:-
1. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
2. ಜಂಟಿ ನಿರ್ದೇಶಕರು(ಯೋಜನೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು - ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಸದರಿ ಅಧಿಸೂಚನೆಯನ್ನು ಪ್ರಚುರಪಡಿಸುವುದು.
6. ನಿರ್ದೇಶಕರ ಆಪ್ತಶಾಖೆಗೆ - ಮಾಹಿತಿಗಾಗಿ.
7. ಡಿವಿಪಿ(2) ವಿಭಾಗಕ್ಕೆ - ಮಾಹಿತಿಗಾಗಿ
8. ಕಛೇರಿ ಪ್ರತಿ.